ಫೇವರಿಟಿಸಮ್, ನೆಪೋಟಿಸಮ್ ಅವಾಯ್ಡ್ ಮಾಡುವುದಕ್ಕೋಸ್ಕರ ಮತ್ತು ಸರಿಯಾಗಿ ಇಂಡಸ್ಟ್ರಿಯಲ್ ಕ್ಲೈಮೇಟ್ ಕೊನೆಯ ಒಬ್ಬ ಮನುಷ್ಯನಿಗೆ ಮುಟ್ಟಬೇಕು ಎಲ್ಲಾ ಹಂತಗಳಲ್ಲಿ ಹೆಡ್ ಕ್ವಾರ್ಟರ್ಸ್‌ಗೆ ಹೋಗಬೇಕು ಹೋಬಳಿಗೆ ತಾಲ್ಲೂಕಿಗೆ ಹೋಗಬೇಕು ಎಂದು ಹೇಳಿದಿರಲ್ಲ ಇದನ್ನು ತಿಳಿಸಲಿಕ್ಕೋಸ್ಕರ ಪ್ರಜಾಪ್ರತಿನಿಧಿಗಳನ್ನು ನಿಮ್ಮ ಸರಕಾರದ ಆದೇಶದ ಮುಖಾಂತರ ನೀವೇನಾದರೂ ಅವರನ್ನು ಸಮಾಲೋಚನೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರೋ.

MR.SPEAKER:- To regularise favouritism?

SRI H.SHIVAPPA:- Institutionalisation of corruption and favouritism is a different issue. To check it and arrest it are you going to involve the local representatives?

MR. SPEAKER:- You examine it.

ಶ್ರೀ ಎಲ್.ಆರ್.ಶಿವರಾಮೇಗೌಡ:- ನೀವು ರಿಸರ್ವೇಷನ್ ಪಾಲಿಸಿಯನ್ನು ಅಡಾಪ್ಟ್ ಮಾಡುತ್ತೀರೋ?

ಅಧ್ಯಕ್ಷರು:- ಆಗಲೇ ಗೋವಿಂದ ಕಾರಜೋಳ ಅವರ ಪ್ರಶ್ನೆಗೆ ಉತ್ತರ ಹೇಳುವಾಗಲೇ ಹತ್ತು ಪರ್ಸೆಂಟ್ ಮೀಸಲಾತಿ ಇದೆ ಎಂದು ಹೇಳಿದರು.

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ತಿಪ್ಪೆಸ್ವಾಮಿ (ಸಣ್ಣ ನೀರಾವರಿ ಸಚಿವರು):- 43 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದಿಡುತ್ತೇನೆ.

ವಿಷಯ:- ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಕ್ಕೆ ಖರ್ಚು ಮಾಡಿರುವ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 169 (491)

ಶ್ರೀ ಅಶೋಕ ಎಸ್.ಕಾಟವೆ (ಹುಬ್ಬಳ್ಳಿ ನಗರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಹಿಂದುಳಿದ, ಪರಿಶಿಷ್ಟ ಜಾತಿ, ಪಂಗಡ ವಿದ್ಯಾರ್ಥಿಗಳಿಗೆ 1994-95, 1995-96ನೇ ಸಾಲಿನಲ್ಲಿ ಉಚಿತ ಸಮವಸ್ತ್ರಕ್ಕೆ ಸರ್ಕಾರದವರು ಎಷ್ಟು ಹಣ ಖರ್ಚು ಮಾಡಿದ್ದಾರೆ, (ಯಾವ ಯಾವ ಸಂಸ್ಥೆಗಳಿಂದ ಬಟ್ಟೆ ಖರೀದಿಸಿದ್ದಾರೆ)

ಆ) ಧಾರವಾಡ ಜಿಲ್ಲೆಯಲ್ಲಿರುವ ಉಚಿತ ವಿದ್ಯಾರ್ಥಿ ನಿಲಯಗಳೆಷ್ಟು? ತಾಲೂಕುವಾರು ವಿದ್ಯಾರ್ಥಿಗಳಿಗೆ 1995-96ನೇ ಸಾಲಿನಲ್ಲಿ ಊಟೋಪಚಾರಕ್ಕೆ ಮಾಡಿದ ಖರ್ಚು ಎಷ್ಟು? ವಿದ್ಯಾರ್ಥಿಗಳೆಷ್ಟು?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಸಮಾಜ ಕಲ್ಯಾಣ ಇಲಾಖೆ:-

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ, ಉಚಿತ ಸಮವಸ್ತ್ರಕ್ಕೆ 94-95ನೇ ಸಾಲಿನಲ್ಲಿ ರೂ. 1,36,23,600.00 ಹಾಗೂ 95-96ನೇ ಸಾಲಿನಲ್ಲಿ ರೂ. 1,46,40,400.00 ಖರ್ಚು ಮಾಡಿದೆ. ಈ ಉಚಿತ ಸಮವಸ್ತ್ರಗಳನ್ನು 94-95ನೇ ಸಾಲಿನಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಬೆಂಗಳೂರು ಹಾಗೂ 95-96ನೇ ಸಾಲಿನಲ್ಲಿ ರಾಜ್ಯದಲ್ಲಿರುವ 12 ಜಿಲ್ಲೆಗಳಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ಮಂಡಳಿ ನಿಗಮ, ಬೆಂಗಳೂರು ಹಾಗೂ ಉಳಿದ 8 ಜಿಲ್ಲೆಗಳಿಗೆ ಅವಶ್ಯವಿರುವ ಕರ್ನಾಟಕ ರಾಜ್ಯ ಪವರ್‌ಲೂಮ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರಿಂದ ಖರೀದಿಸಲಾಗಿದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ:- ರಾಜ್ಯದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಉಚಿತ ಸಮವಸ್ತ್ರಕ್ಕಾಗಿ 1994-95, 1995-96ನೇ ಸಾಲಿನಲ್ಲಿ ಕ್ರಮವಾಗಿ ರೂ. 75,89,652.00 ಮತ್ತು ರೂ. 48,46,622.00ಗಳನ್ನು ಖರ್ಚು ಮಾಡಲಾಗಿದೆ. 1994-95ನೇ ಸಾಲಿಗೆ ಮಾತ್ರ ಬೆಂಗಳೂರು ನಗರ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಗ್ರಾಮಾಂತರ ಅಭಿವೃದ್ಧಿ ಸಂಘ, ಶಿರಾ ಮತ್ತು ಹೊಸಪೇಟೆ ನೇಕಾರರ ಸಂಘದಿಂದ ಬಟ್ಟೆಯನ್ನು ಖರೀದಿಸಲಾಗಿದೆ. ಉಳಿದ ಜಿಲ್ಲೆಗಳಿಗೆ ಕಳೆದ ಎರಡೂ ವರ್ಷಗಳಿಂದ ಕೆ.ಹೆಚ್.ಡಿ.ಸಿ.ಯಿಂದ ಬಟ್ಟೆ ಖರೀದಿಸಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

1995-96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ವಿದ್ಯಾರ್ಥಿ ನಿಲಯಗಳಿಗೆ ಉಚಿತ ಊಟೋಪಚಾರಕ್ಕೆ ಖರ್ಚು ಮಾಡಿದ ಹಣದ ವಿವರ.

ಕ್ರಮ ಸಂಖ್ಯೆ	ತಾಲೂಕು	ಸಮಾಜ ಕಲ್ಯಾಣ ಇಲಾಖೆ	
		ವಿದ್ಯಾರ್ಥಿಗಳ ಸಂಖ್ಯೆ	ಖರ್ಚು ಮಾಡಿರುವ ಹಣ
1.	ಧಾರವಾಡ	150	2,77,505
2.	ಹುಬ್ಬಳ್ಳಿ	175	12,50,500
3.	ಕಲಘಟಗಿ	83	2,32,220
4.	ನವಲಗುಂದ	100	2,04,015
5.	ಗದಗ	150	4,10,152
6.	ನರಗುಂದ	100	1,76,448
7.	ಮುಂಡರಗಿ	199	6,27,698
8.	ರೋಣ	228	5,44,544
9.	ಹಾವೇರಿ	100	2,43,565
10.	ರಾಣೆಬೆನ್ನೂರು	180	4,57,494
11.	ಹಿರೇಕೆರೂರ್	390	10,45,555
12.	ಬ್ಯಾಡಗಿ	325	9,54,088
13.	ಸವನೂರ್	75	1,97,140
14.	ಶಿಗ್ಗಾಂವ್	190	4,74,330
15.	ಕುಂದಗೋಳ್	50	1,41,482
16.	ಶಿರಹಟ್ಟಿ	235	5,90,010
17.	ಹಾನಗಲ್	300	7,52,253
		3030	85,78,999

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ	
ವಿದ್ಯಾರ್ಥಿಗಳ ಸಂಖ್ಯೆ	ಖರ್ಚು ಮಾಡಿರುವ ಹಣ
320	6,83,168
250	5,32,540
75	1,66,318
105	2,38,794
368	7,83,416
125	1,53,241
285	5,83,026
255	5,11,320
260	5,78,366
445	9,34,031
110	2,33,453
150	3,22,573
150	3,23,384
300	6,03,257
125	2,91,456
175	3,18,447
300	6,06,258
3798	78,62,020